## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸದಸ್ಯರ ಸಮಿತಿ ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡಿನ

## ದಿನಾಂಕ: 07-04-2021 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/ 2020-21/21-09-2020 ರ ಆದೇಶದಂತೆ ದಿನಾಂಕ: 07-04-2021 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ **ಕೇನೋಪಿಯಾ ಹೋಟೆಲ್, 2ನೇ ಮಹಡಿ, ಪಿಯು ಕಟ್ಟಡ, ಬೆಂಗಳೂರು-560008** ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು,

### ಸಭೆಗೆ ಹಾಜರಿದ್ದವರ ವಿವರಗಳು

1) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ, ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ), ಸಹಾಯಕ ಕಂದಾಯ ಅಧಿಕಾರಿ (ದೊಮ್ಮಲೂರು),
2) ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಅರಣ್ಯ ಆರೋಗ್ಯ, ಕಾಮಗಾರಿ, ಘನತಾಜ್ಯ ವಿಭಾಗ, ಅಧಿಕಾರಿಗಳು, ಬೆಸ್ಕಾಂ ಮತ್ತು BWSSB ಅಧಿಕಾರಿಗಳು ಹಾಜರಿದ್ದರು.
3) ವಾರ್ಡ್ ಸಮಿತಿ ಸದಸ್ಯರಾದ, ಶ್ರೀ.ಅಶ್ವತ್ ನಾರಾಯಣಾ, ಶ್ರೀ. ಶ್ರೀನಿವಾಸ ನಾಯ್ಡು, ,ಗಾಯಿತ್ರಿ. ಆಶಾ, ಅಲ್ವಿನ್, ರಮೇಶ್ ರೆಡ್ಡಿ, ಗಜಾರಾಜ್ ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಶಾಸಕರು ಮತ್ತು ಹಾಜರಿದ್ದ ಅಧಿಕಾರಿಗಳನ್ನು ಮತ್ತು ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

### ವಾರ್ಡ್ ಕಮಿಟಿ ಸದಸ್ಯರು ಚರ್ಚಿಸಿದಂತಹ ವಿಷಯಗಳು ;-

1) ರಮೇಶ್ ರೆಡ್ಡಿ, ರವರು ಸುಬ್ರಮ್ಯಣ್ಯ ದೇವಸ್ತಾನ ಮುಖ್ಯದ್ವಾರದಲ್ಲಿ ನೀರು ಪೋಲಾಗುತ್ತಿದ್ದು ಅಲ್ಲಿ ನೀರು ಶೇಕರಣೆಯಾಗಿರುತ್ತದೆ ಅಲ್ಲಿ ಭಕ್ತಾಧಿಗಳ ಸಂಚಾರಕ್ಕೆ ಅಡ್ಡಿಯಾಗುತ್ತಿದ್ದು ಕೂಡಲೆ ದುರಸ್ತಿ ಮಾಡಬೇಕೆಂದು ಹಾಗೂ ಚರಂಡಿಯಲ್ಲಿರುವ ಶಿಲ್ಟ್‌ನ್ನು ತೆರವುಗೊಳಸಬೇಕೆಂದು ಕೋರಿದರು.

   ಕ್ರಮ :- AEE ದೊಮ್ಮಲೂರು. ರವರು ಕ್ರಮ ವಹಿಸುವುದು.

2) ಆಶಾ ಅಲ್ವಿನ್ ರವರು ಎ) 3ನೇ ಮತ್ತು 4ನೇ ಕ್ರಾಸ್‌ನಲ್ಲಿ ಹಾಗೂ ವಾರ್ಡಿನ ಅನೇಕ ರಸ್ತೆಗಳ ಬೀದಿ ದೀಪಾಗಳು ಹುರಿಯುತ್ತಿಲ್ಲವೆಂದು ದುರಸ್ತಿಗೊಳಸಬೇಕೆಂದು ಮತ್ತು ವಾರ್ಡಿನ ಕೆಳವೊಂದು ಬೀದಿ ದೀಪ ಸ್ತಂಭಗಳು ತುಂಬಾ ಹಳೆಯದಾಗಿದ್ದು ಬದಲಿಸಬೇಕೆಂದು ಕೋರಿರುದರು.

ಕ್ರಮ ;- AEE BESCOM ರವರು ಕ್ರಮ ವಹಿಸುವುದು.

ಬಿ) ಸಂಚಾರಿ ಪೋಲಿಸ್ ರವರುಗಳು ಪಾರ್ಕಿಂಗ್ ಸ್ಥಳದಲ್ಲಿ ವಾಹನಗಳನ್ನು ನಿಲುಗಡೆ ಮಾಡಿದ್ದರು ಸಹ ವಾಹನಗಳನ್ನು ಟೋಯಿಂಗ್ ಮಾಡಲಾಗುತ್ತದೆ. ಇದನ್ನು ಕೈ ಬೀಡಲು ಕೋರಿರುತ್ತಾರೆ.

ಕ್ರಮ: – ಸಂಚಾರಿ ಪೋಲಿಸ್ ಠಾಣೆ ರವರು ಕ್ರಮ ವಹಿಸುವುದು.

3) ಆಶ್ವತ್‌ನಾರಾಯಣ್ ರವರು ಜೋಗುಪಾಳ್ಯ ಮುಖ್ಯರಸ್ತೆಯಲ್ಲಿ ಬೀದಿ ಬದಿ ವ್ಯಾಪಾರಸ್ಥರು ಸಾರ್ವಜನಿಕರು ಓಡಾಡುವ ರಸ್ತೆಗಳನ್ನು ಅತಿಕ್ರಮಿಸಿ ವ್ಯಾಪಾರ ಮಾಡುತ್ತಿರುವ ವ್ಯಾಪಾರಸ್ಥರನ್ನು ತೆರವುಗೊಳಿಸಲು ಕೋರಿದರು.

ಕ್ರಮ ;- AEE ದೊಮ್ಮಲೂರು. (ಕಾಮಗಾರಿ) & ಪೋಲಿಸ್ ಇಲಾಖೆ ರವರು ಕ್ರಮ ವಹಿಸುವುದು.

4)ಶ್ರೀನಿವಾಸ ರವರು ಮೇನ್ ಚಾನಲ್ ರಸ್ತೆಯಲ್ಲಿ ಡಿ. ಸಿಲ್ಟಿಂಗ್ ಕಾಮಾಗಾರಿ ಒಂದು ತಿಂಗಳದ್ದ ಪೂರ್ಣಗೊಳಲ್ಲದೇ ಸ್ಥಗಿತಗೊಂಡಿರುತ್ತದೆ. ಅದನ್ನು ತುರ್ತಾಗಿ ತೆರವುಗೊಳಿಸಲು ಕೋರಿದರು.

ಕ್ರಮ ;- AEE ದೊಮ್ಮಲೂರು. (ಕಾಮಗಾರಿ) ರವರು ಕ್ರಮ ವಹಿಸುವುದು.

<u>ಸಾರ್ವಜನಿಕರು ಸಲ್ಲಿಸಿರುವ ದೂರುಗಳು:-</u>

1) ಮಂಜುಳ ರವರು ಅಪ್ಪಾರೆಡ್ಡಿ ಪಾಳ್ಯದಲ್ಲಿ ಗುಂಡಿಗಳನ್ನು ಮುಚ್ಚವುದು ಹಾಗೂ ಕುಡಿಯುವ ನೀರಿನ ಸಮಸ್ಯೆ ಸರಿಪಡಿಸಲು ಕೋರಿದರು.

ಕ್ರಮ;- AEE ದೊಮ್ಮಲೂರು. (ಕಾಮಗಾರಿ) & AEE BWSSB ಅಧಿಕಾರಿಗಳು ಕ್ರಮ ವಹಿಸುವುದು.

2) ಥಾಮಸ್ ಜೇಸುದಾಸನ್ (Secretary Admiralty Manor Apartment Owners Association) ರವರು

ಎ) 6ನೇಮುಖ್ಯರಸ್ತೆ ಗೋಪಾಲನ್ ಅಪಾರ್ಟ್‌ಮೆಂಟ್ ಹತ್ತಿರ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿಲ್ಲ ಹಾಗೂ 6ನೇ ಮುಖ್ಯ ರಸ್ತೆ ಮತ್ತು 13ನೇ ಕ್ರಾಸ್ ಇಂದಿರಾನಗರ ಜಂಕ್ಷನ್‌ನಲ್ಲಿ ಹೊಸ ವಿದ್ಯುತ್ ಕಂಬಗಳನ್ನು ಅಳವಡಿಸಲು ಕೋರಿದರು.

ಬಿ) 6ನೇ ಮುಖ್ಯರಸ್ತೆ. 1314, 15 ನೇ ಕ್ರಾಸ್ ನಲ್ಲಿ ರಸ್ತೆಯ ಗುಂಡಿಗಳನ್ನು ಮುಚ್ಚಬೇಕು, ಮತ್ತು ಗುಂಡಿಗಳನ್ನು ಅಗೆಯದಂತೆ, ನೋಡಿಕೊಳ್ಳಬೇಕು ಮತ್ತು ರಸ್ತೆ ಡಾಂಬರಿಕರಣ ಗೊಳಸಲು ಕೋರಿರುವುದು.

ಸಿ)ಮೂಕಾಂಬಿಕ ದೇವಸ್ಥಾನದ ಹತ್ತಿರ ತರಕಾರಿ ಮಾರುವ ಬಂಡಿಗಳು, ವಾಟರ್ ಕ್ಯಾನ್ ಮಾರಾಟ, ಮತ್ತು ರಾಜಕಾರಣೀಗಳ ಭಾವಚಿತ್ರವೊಳ ಬೋಡ್ ಅನ್ನು ತೆರವುಗೊಳಿಸಲು ಕೋರಿರುವುದು.

ಡಿ)ವಾರ್ಡಿನ ಅನೇಕ ಕಡೆ ಕಟ್ಟಡ ನಿರ್ಮಾಣ ಮಾಡುತ್ತಿರುವರು ಅವಶೇಷಗಳು (Dabris) ರಸ್ತೆಯಲ್ಲೆ ಹಾಕಲಾಗಿದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಕೂಡಲೆ ತೆರವುಗೊಳಸಬೇಕೆಂದು ಕೋರಿದರು.

ಕ್ರಮ: AEE ಮತ್ತು AEE ದೊಮ್ಮಲೂರು. (ಕಾಮಗಾರಿ) ರವರು ಕ್ರಮ ವಹಿಸುವುದು.

3)ಇಂದಿರನಗರ ವೆಲ್‌ಫೇರ್ ಅಷೋಷಿಯೆನ್ ರವರು ಇಂದಿರನಗರ 10ನೇ ಮುಖ್ಯರಸ್ತೆಯಲ್ಲಿ BWSSB ಕಾಮಗಾರಿಯನ್ನು ಮುಗಿಸಿದ್ದು ರಸ್ತೆಯು ಬಹಳ ಹದೆಗೆಟ್ಟಿದ್ದು ಇದರಿಂದ ವಾಹನಗಳು ಹಾಗೂ ರಸ್ತೆಯಲ್ಲಿ ಸಾರ್ವಜನಿಕರು ರಸ್ತೆಯಲ್ಲಿ ಓಡಾಡಲು ಬಹಳ ತೊಂದರೆಯಾಗುತ್ತಿದ್ದು ಕೂಡಲೆ ರಸ್ತೆಗೆ ಡಾಂಬರಿಕರಣಗೊಳಸಬೇಕೆಂದು ಕೋರಿದರು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಆಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ–89– ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು,

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ